# ಮರಗಳು ಮತ್ತು ವಾಸ್ತು

ದೂರ ಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು
ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು..

ವಾಸ್ತು ಹೇಳುವುದೂ ಇದನ್ನೇ. ಎತ್ತರದ ಜಾಗದಲ್ಲಿ ಮನೆಯಿದ್ದರೆ, ಮನೆಯೊಳಕ್ಕೆ ನೀರು ಹರಿದು ಬರುವುದಿಲ್ಲವಾದ್ದರಿಂದ, ಬೆಟ್ಟದಲ್ಲಿಮನೆ ಸರಿ; ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು, ಎಂಬುದು ಸುತ್ತಲೂ ಹೂವಿನ ಗಿಡಗಳು ಇರಬೇಕೆಂಬುದನ್ನು ಬಿಂಬಿಸುತ್ತದೆ.

ಈ ಹಾಡಿನ ಮೂರನೆಯ ಸಾಲು 'ತಂಗಾಳಿ ಜೋಗುಳವ ಹಾಡಲೆಬೇಕು' ನಿಜ. ಗಾಳಿಯ ಜೋಗುಳವಿರದಿದ್ದರೆ ಬದುಕು ಕಷ್ಟ. ಗಾಳಿ ಇರಬೇಕೆಂದರೆ ಮರಗಳು ಇರಬೇಕು. ಆದರೆ ಯಾವ ಮರಗಳು ಇರಬೇಕು, ಎಲ್ಲಿರಬೇಕು ಎಂಬುದು ಬಹಳ ಮುಖ್ಯವಾದ ಅಂಶ.

ಇಂದಿನ 'ಅರೆಬೆಂದ ವಾಸ್ತುಶಾಸ್ತ್ರಿಗಳು' 'ಉತ್ತರ ಹಾಗೂ ಪೂರ್ವದಲ್ಲಿ ಮರಗಳು ಇರಬಾರದು. ಇರುವ ಮರಗಳನ್ನೆಲ್ಲಾ ಕಡಿಸಿಬಿಡಿ. ಅಥವಾ ಆ ಜಾಗಗಳಲ್ಲಿ ಮರಗಳಿರುವ ನಿವೇಶನಗಳನ್ನೇ ಕೊಳ್ಳಬೇಡಿ' ಎನ್ನುತ್ತಾರೆ. ತೆಂಗಿನಮರವನ್ನು ಕಡಿಯಬಾರದು ಎಂಬ ಸದಾಶಯಕ್ಕೂ ಅವರಲ್ಲಿ ಒಂದು ಪರಿಹಾರವುಂಟು. ಇಂಜೆಕ್ಷನ್ ಕೊಡಿಸಿಬಿಡಿ, ಮರ ತಾನಾಗಿಯೇ ಒಣಗಿ ಬಿದ್ದುಹೋಗುತ್ತದೆ? ಎನ್ನುತ್ತಾರವರು. ಇರಲಿ, ಅವರು ಹೇಳುವ ವಿಷಯದ ಸತ್ಯಾಸತ್ಯತೆಯನ್ನು ವಿಶ್ಲೇಷಿಸೋಣ.

ಯಾವುದೇ ಮನೆಗೆ ಗಾಳಿ, ಬೆಳಕು ಅತ್ಯಗತ್ಯ. ಮನೆಗೆ ಬೆಳಕು ಬರುವುದು ಉತ್ತರ ಮತ್ತು ಪೂರ್ವದಿಂದ. ಹೀಗಾಗಿ ಮನೆಯ ಪೂರ್ವದಿಕ್ಕಿನಲ್ಲಿ ಹಾಗೂ ಉತ್ತರದಿಕ್ಕಿನಲ್ಲಿ ಮರಗಳು ಇರಬಾರದು ಎಂಬ ಇವರ ವಾದ ಮೇಲ್ನೋಟಕ್ಕೆ ಸರಿ ಎನ್ನಿಸಿದರೂ ಇದೇ ಸಂಪೂರ್ಣ ಸತ್ಯವಲ್ಲ. ನಿವೇಶನಗಳು ಚಿಕ್ಕದಾಗಿದ್ದಲ್ಲಿ (30X40ಗಿಂತಲೂ ಚಿಕ್ಕವಾಗಿದ್ದಲ್ಲಿ) ಮರಗಳನ್ನು ಎಲ್ಲಿ ನೆಟ್ಟರೂ ತೊಂದರೆಯೇ. ಹಾಗೂ ನೆಡಬೇಕಿದ್ದರೆ ಪಶ್ಚಿಮದತ್ತ ಅಥವಾ ದಕ್ಷಿಣದತ್ತ ನೆಡಬೇಕು ಮತ್ತು ಅಂತಹ ಮರಗಳು ಹರಡಿಕೊಳ್ಳುವ ಬೇರಿನವಾಗಿರದೆ ಆಳಕ್ಕಿಳಿಯುವ ಬೇರಿನವಾಗಿರಬೇಕು; ಕೊಂಬೆಗಳು ವಿಶಾಲವಾಗಿ ಹರುಡುವಂತಹವಾಗಿರಬಾರದು. ಎಂದರೆ ಅಶೋಕವೃಕ್ಷ, ತೆಂಗು, ಅಡಿಕೆ, ಇತ್ಯಾದಿ ಊರ್ಧ್ವಗಾಮಿ ವೃಕ್ಷಗಳನ್ನು ಬೆಳೆಸಬಹುದು, ಈ ಮರಗಳು ಹರಡಿಕೊಳ್ಳುವುದಿಲ್ಲವಾದ್ದರಿಂದ ಮನೆಗೆ ಬರುವ ಬೆಳಕು ಕಡಿಮೆಯಾಗುವುದಿಲ್ಲ. ಆದರೆ ಸಂಪಿಗೆ, ಮಾವು, ಅರಳಿ, ಇತ್ಯಾದಿ ಮರಗಳು ಬಹಳವೇ ಹರಡುವುದರಿಂದ ಮನೆಯಲ್ಲಿ ಕತ್ತಲೆ ಹೆಚ್ಚಾಗುತ್ತದೆ. ನಿವೇಶನಗಳು ದೊಡ್ಡದಾದಂತೆ ಸುತ್ತಲೂ ಸಾಕಷ್ಟು ಜಾಗ ಬಿಡುವುದರಿಂದ ಅಲ್ಲಿ ಯಾವ ವಿಧವಾದ ಮರಗಳನ್ನು ಬೇಕಾದರೂ ಬೆಳೆಸಬಹುದು. ನಲವತ್ತು ಅಡಿಗಳಿಗಿಂತಲೂ ಅಗಲ ಹಾಗೂ ಅರವತ್ತು ಅಡಿಗಳಿಗಿಂತಲೂ ಉದ್ದ ಇರುವ ನಿವೇಶನಗಳಲ್ಲಿ ಮುಂದೆ ಕಡಿಮೆಯೆಂದರೆ ಹದಿನೈದು ಅಡಿಗಳಷ್ಟು ಜಾಗ ಖಾಲಿ ಇರಬೇಕೆಂಬುದು ನಿಯಮ. ಈ ಹದಿನೈದು ಅಡಿಯಲ್ಲಿ ಕಾಂಪೌಂಡಿನಿಂದ ಮೂರು ಅಡಿ ಬಿಟ್ಟು ಯಾವುದೇ ಮರವನ್ನು (ಅರಳಿ ಮತ್ತು ಆಲದ ಮರಗಳನ್ನು ಬಿಟ್ಟು) ಬೆಳೆಸಬಹುದು. ಅಶೋಕವೃಕ್ಷದಂತೆ ಮೇಲಕ್ಕೆ ಸಪೂರವಾಗಿ ಹೋಗುವ ಯಾವುದೇ ವೃಕ್ಷ



ಮನೆಯ ಉತ್ತರ, ಪೂರ್ವಗಳ ಸಹಿತ ಯಾವುದೇ ದಿಕ್ಕಿನಲ್ಲಿ ಬೆಳಿಸಿದರೂ ಮನೆಗೆ ಗಾಳಿ, ಬೆಳಕಿನ ತೊಂದರೆಯಾಗುವುದಿಲ್ಲ. ಪರಂಗಿ, ಸಪೋಟ, ಮಾವು, ಪಾರಿಜಾತ, ಸಂಪಿಗೆಯಂತಹ ಮರಗಳನ್ನೂ ಇಲ್ಲಿ ಬೆಳೆಸಬಹುದು. ಬೇವು, ಹೊಂಗೆಯ ಮರಗಳನ್ನು ನೆಟ್ಟರಂತೂ ಮನೆಗೆ ಮಾತ್ರವಲ್ಲದೆ ಪರಿಸರಕ್ಕೂ ಹಿತ.

ತೆಂಗಿನಂತಹ ಗಿಡಗಳನ್ನು ನೆಡುವಾಗ ಸಸಿಯನ್ನು ಕಡಿಮೆಯೆಂದರೆ ಐದು ಅಡಿ ಆಳದಲ್ಲಿ ನೆಟ್ಟರೆ ಪಾಯಕ್ಕೆ ಜಖಂ ಆಗುವುದು ತಪ್ಪುತ್ತದೆ. ಕೊಂಚ ಮೇಲೆ ನೆಟ್ಟಲ್ಲಿ ಆ ಜಾಗಕ್ಕೆ ಸಮೀಪವಾದ ಪಾಯದಲ್ಲಿ ಕಂಬಿಗಳನ್ನು ಅಳವಡಿಸಿ ಕಾಂಕ್ರೀಟ್ ಬೀಮ್ ಹಾಕುವುದು ಕ್ಷೇಮ. ಯಾವುದೇ ಮರವನ್ನು ಬೆಳಿಸುವ ಮುನ್ನ ಅದು ಮನೆಯ ಕಿಟಕಿಗೆ ಅಡ್ಡಲಾದ ಜಾಗದಲ್ಲಿ ಬಾರದಂತೆ ನೆಟ್ಟರೆ ಬೆಳಕಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂಬುದನ್ನು ಗಮನದಲ್ಲಿರಿಸಿಕೊಂಡು ಗಿಡ ನೆಡುವುದು ಸೂಕ್ತ. ಈ ಮರಗಳಲ್ಲದೆ ಹೂವಿನ ಗಿಡಗಳನ್ನು ಎಷ್ಟು ಬೇಕಾದರೂ, ಎಲ್ಲಿ ಬೇಕಾದರೂ, ಅನುಕೂಲಕ್ಕೆ ತಕ್ಕಂತೆ ಬೆಳೆಸಿಕೊಳ್ಳಬಹುದು.

ಇವೆಲ್ಲಾ ನಿವೇಶನಗಳಲ್ಲಿ ಬೆಳೆಸಬಹುದಾದ ಮರಗಳ ವಿಷಯವಾದರೆ, ನಿವೇಶನ ಕೊಳ್ಳುವ ಮುಂಚೆ ನೋಡಬೇಕಾದ ಅಂಶಗಳು ಬೇರೆ ಇರುತ್ತವೆ. ಮನೆಯ ಪೂರ್ವ ಮತ್ತು ಉತ್ತರಗಳಲ್ಲಿ ಮನೆಯ ಮೇಲೆ ಹೆಚ್ಚು ಕಾಲ ನೆರಳು ಬೀರದಷ್ಟು ದೂರದಲ್ಲಿ ಯಾವುದೇ ಮರಗಳಿದ್ದರೂ ನಿವೇಶನಗಳನ್ನು ಕೊಳ್ಳಲು ಯೋಚಿಸಬೇಕಿಲ್ಲ. ಆದರೆ ಮನೆಯ ಪಕ್ಕದಲ್ಲೇ ಬಹಳ ದೊಡ್ಡದಾಗಿ ಬೆಳೆದ ಅರಳಿ ಮರವೋ, ಆಲದ ಮರವೋ ಇದ್ದರೆ ಹಾಗೂ ಅದು ಮನೆಯ ಪೂರ್ವೋತ್ತರಗಳಲ್ಲಿದ್ದರೆ ಆ ನಿವೇಶನಗಳ ಮೇಲೆ ಬಹಳ ಕಾಲ ನೆರಳು ಬೀಳುವುದರಿಂದ ಸಾಕಷ್ಟು ಕ್ರಿಮಿಕೀಟಗಳು ವೃದ್ಧಿಯಾಗುತ್ತವೆ ಹಾಗೂ ತನ್ಮೂಲಕ ಮನೆಯಲ್ಲಿ ಅನಾರೋಗ್ಯ ನೆಲೆಸುತ್ತದೆ. ಆದ್ದರಿಂದ ನಿವೇಶನಕ್ಕೆ ಪೂರ್ವ ಹಾಗೂ ಉತ್ತರಗಳಲ್ಲಿ ದೊಡ್ಡ ಮರಗಳಿದ್ದರೆ ಆ ನಿವೇಶನವನ್ನು ಕೈಬಿಡಬಹುದು; ದಕ್ಷಿಣಕ್ಕೋ, ಪಶ್ಚಿಮಕ್ಕೋ ದೊಡ್ಡ ಮರಗಳಿದ್ದರೆ ಯಾವುದೇ ದುಷ್ಪರಿಣಾಮಗಳಿರುವುದಿಲ್ಲ.

ಮನೆ ಬೇಕೆಂದು ಮರ ಕಡಿಯುವುದು ಪರಿಸರಕ್ಕೂ, ಮನುಕುಲಕ್ಕೂ ಹಾನಿಕರ. ಮರವನ್ನು ಉಳಿಸಿಕೊಂಡು ಮನೆಯನ್ನು ನ್ಯಾಸಗೊಳಿಸಿಕೊಳ್ಳುವುದು ಆರೋಗ್ಯಕರ.

■ ವೈ-ಚಾರಿ